ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:-ಕಾಶಿಇ/ಆಯವ್ಯಯ/ ಸುತ್ತೋಲೆ/ ಸಪ್ರದಕಾ/06/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 15.11.2021

**:::: ಸುತ್ತೋಲೆ ::::**

ವಿಷಯ: ಕಾಲೇಜು ಶಿಕ್ಷಣ ಇಲಾಖಾ ವೆಚ್ಚಗಳನ್ನು ಖಜಾನೆ-2ರಲ್ಲಿ ಸಮನ್ವಯೀಕರಿಸುವ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ:-ಆಇ:01:ಟಿ.ಎಫ್.ಪಿ 2021 ದಿನಾಂಕ:29.10.2021

****

ಮೇಲ್ಕಂಡ ಸರ್ಕಾರದ ಸುತ್ತೋಲೆಯಂತೆ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಟವಾಡೆ ಅಧಿಕಾರಿಗಳು (DDO) ಗಳು ಮಾಹೆವಾರು ಭರಿಸುವ ವೆಚ್ಚಗಳ ವರದಿ 62 (ಬಿ) ಯನ್ನು ಪರಿಶೀಲಿಸಿ ಖಜಾನೆ-2 ರಲ್ಲಿ ಸಮನ್ವಯೀಕರಿಸಲು ಅವಕಾಶವಿರುತ್ತದೆ. ಅದರಂತೆ ವೆಚ್ಚಗಳ ಸಮನ್ವಯಯೀಕರಣ ನಮೂನೆ ಗಳು/ ವರದಿಗಳನ್ನು ಸಿಸ್ಟಂನಲ್ಲಿ ಸೃಜಿಸಿ ಪ್ರತೀ ಮಾಹೆಯ 10ನೇ ತಾರೀಖಿನ ಒಳಗಾಗಿ ಲೆಕ್ಕ ಸಮನ್ವಯ (RECONCILATION) ಮಾಡಿ ಈ ಕಛೇರಿಗೆ ಸಲ್ಲಿಸುವುದು. ತಪ್ಪಿದ್ದಲ್ಲಿ ಡಿಡಿಒಗಳ ವೇತನ ಮತ್ತು ಇತರೆ ಬಿಲ್ಲುಗಳನ್ನು ತಡೆಹಿಡಿಯಲು ಉಲ್ಲೇಖಿತ ಆದೇಶದಲ್ಲಿ ಖಜಾನಾಧಿಕಾರಿಗಳಿಗೆ ಸೂಚಿಸಲಾಗಿದೆ.

**ನಿರ್ದೇಶಕರು,**
**ಕಾಲೇಜು ಶಿಕ್ಷಣ ಇಲಾಖೆ.**

**ಅಡಕ:**

1. ಸರ್ಕಾರಿ ಆದೇಶ ಸಂಖ್ಯೆ:ಆಇ:01:ಟಿ.ಎಫ್.ಪಿ 2021 ದಿನಾಂಕ: 29.10.2021- ಸುತ್ತೋಲೆಯ ಪ್ರತಿ
2. ಖಜಾನೆ-2ರಲ್ಲಿ ಕ್ರಮವಹಿಸಲು WORK FLOW CHART

**ಪ್ರತಿಯನ್ನು:**

1. ಇಲಾಖಾ ವ್ಯಾಪ್ತಿಯ ಎಲ್ಲಾ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳಿಗೆ: ಅಗತ್ಯ ಕ್ರಮಕ್ಕಾಗಿ,
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕಾ.ಶಿ.ಇ ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ

180557720

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 01 ಟಿಎಫ್‌ಸಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ

ಬೆಂಗಳೂರು,ದಿನಾಂಕ:29-10-2021

## ಸುತ್ತೋಲೆ

ವಿಷಯ:- ಇಲಾಖಾ ವೆಚ್ಚಗಳ ಲೆಕ್ಕಗಳನ್ನು ಖಜಾನೆ-2 ರಲ್ಲಿ ಸಮನ್ವಯೀಕರಿಸುವ ಕುರಿತು.

****-****

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 346 ರಂತೆ ಸಾರ್ವಜನಿಕ ಸೇವೆಗಳಲ್ಲಿನ ವೆಚ್ಚದ ಪ್ರಗತಿಯನ್ನು ಗಮನಿಸುವುದು ಹಾಗೂ ವೆಚ್ಚವನ್ನು ಅನುದಾನ ನಿಯಂತ್ರಣ ಮಾಡುವ ಹೊಣೆಗಾರಿಕೆ ಆಯಾ ಸಕ್ಷಮ ಪ್ರಾಧಿಕಾರ ಮತ್ತು ನಿಯಂತ್ರಣಾಧಿಕಾರಿಗಳದ್ದಾಗಿರುತ್ತದೆ. ಸದರಿ ಹೊಣೆಗಾರಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಪಾಲಿಸಬೇಕಾದ ವಿವರವಾದ ವಿಧಾನವನ್ನು ಆರ್ಥಿಕ ಸಂಹಿತೆಯಲ್ಲಿ ನಿಗದಿಗೊಳಿಸಲಾಗಿದೆ.

ಸರ್ಕಾರದ ಆದೇಶ ಸಂ:ಎಫ್‌ಡಿ 02 ಟಿಎಫ್‌ಸಿ 2004, ದಿನಾಂಕ:09.09.2004 ರಲ್ಲಿ ತಿಳಿಸಿರುವಂತೆ ಹಣ ಸೆಳೆಯುವ ಅಧಿಕಾರಿಗಳು(ಡಿಡಿಓ), ನಿಯಂತ್ರಣಾಧಿಕಾರಿಗಳು(ಸಿಓ) ಮತ್ತು ಮುಖ್ಯ ನಿಯಂತ್ರಣಾಧಿಕಾರಿಗಳು (ಸಿಸಿಓ) ರವರು ಲೆಕ್ಕಸಮನ್ವಯೀಕರಣಕ್ಕೆ ನಿಗಧಿಗೊಳಿಸಿರುವ ನಮೂನೆ-62(ಬಿ) (Register showing expenditure by Head of Accounts), ನಮೂನೆ 62(ಸಿ) (Broadsheet for watching receipt of account from disbursing officers), ನಮೂನೆ 62(ಡಿ) (Compilation sheet), ನಮೂನೆ 62(ಇ) consolidated account ಗಳನ್ನು ನಿರ್ವಹಿಸುವ ಕಾರ್ಯವಿಧಾನವನ್ನು ಮುಂದುವರೆಸಲಾಗಿದೆ. ರಾಜಸ್ವ ಮತ್ತು ವೆಚ್ಚದ ಇಲಾಖಾ ಲೆಕ್ಕಗಳನ್ನು ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಕಡ್ಡಾಯವಾಗಿದೆ.

ಪ್ರಸ್ತುತ ಅನುಕಲಿತ ಆರ್ಥಿಕ ನಿರ್ವಹಣಾ ವ್ಯವಸ್ಥೆ ಖಜಾನೆ-2 ಅನುಷ್ಠಾನದ ಹಿನ್ನೆಲೆಯಲ್ಲಿ ಸಮನ್ವಯೀಕರಣದ ನಮೂನೆ ಹಾಗೂ ವರದಿಗಳನ್ನು ಸಿದ್ಧಪಡಿಸುವ ಪರಿಷ್ಕೃತ ವಿಧಾನವನ್ನು ಸರ್ಕಾರದ ಸುತ್ತೋಲೆ ಸಂ:ಆಇ 02 ಟಿಎಫ್‌ಸಿ 2018, ದಿ:19.07.2018 ರ ಅನುಬಂಧದಲ್ಲಿ ನೀಡಲಾಗಿದೆ. ಖಜಾನೆ-2 ಅನುಷ್ಠಾನಗೊಂಡಿರುವ ಇಲಾಖೆಗಳು ಲೆಕ್ಕಸಮನ್ವಯೀಕರಣಕ್ಕಾಗಿ ಸದರಿ ವಿಧಾನವನ್ನು ಅನುಸರಿಸಲು ಹಾಗೂ ವೆಚ್ಚಗಳ ಸಮನ್ವಯೀಕರಣದ ನಮೂನೆಗಳು / ವರದಿಗಳನ್ನು ಸಿಸ್ಟಂ ನಲ್ಲಿ ಸೃಜಿಸಿ ಲೆಕ್ಕಸಮನ್ವಯೀಕರಣವನ್ನು ನಿಗದಿತವಾಗಿ ನಿರ್ವಹಿಸುವಂತೆ ತಮ್ಮ ಅಧೀನದ ಎಲ್ಲಾ ಇಲಾಖಾ ನಿಯಂತ್ರಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಖಜಾನೆ-2 ರಲ್ಲಿ ಮ್ಯಾಪಿಂಗ್ ಆಗಿರುವ ಡಿಡಿಓ ಗಳು ಭರಿಸುವ ವೆಚ್ಚಗಳನ್ನು ಸಮನ್ವಯೀಕರಿಸಲು ಸಹಾಯಕವಾಗುವಂತೆ ನಮೂನೆ 62(ಬಿ), ನಿಯಂತ್ರಣಾಧಿಕಾರಿಗಳಿಗೆ ನಮೂನೆ 62(ಸಿ) ಮತ್ತು 62(ಡಿ) ಗಳನ್ನು ಮತ್ತು ಮುಖ್ಯ ನಿಯಂತ್ರಣಾಧಿಕಾರಿಗಳಿಗೆ ನಮೂನೆ 62(ಇ) ಸಿಸ್ಟಂ ನಲ್ಲಿ ಸೃಜಿಸಲು ಖಜಾನೆ-2 ರಲ್ಲಿ ಅವಕಾಶವಿರುತ್ತದೆ.

ಪ್ರಸ್ತುತ ಪಿಆರ್‌ಐ ಇಲಾಖೆಯು ಸೇರಿದಂತೆ ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಖಜಾನೆ-2ನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವುದರಿಂದ ದಿ:19/07/2018ರ ಸುತ್ತೋಲೆಯಲ್ಲಿ ತಿಳಿಸಿರುವ ಪರಿಷ್ಕೃತ ವಿಧಾನದಂತೆ ವೆಚ್ಚಗಳ ಸಮನ್ವಯೀಕರಣದ ನಮೂನೆಗಳು / ವರದಿಗಳನ್ನು ಸಿಸ್ಟಂ ನಲ್ಲಿ ಸೃಜಿಸಿ ಲೆಕ್ಕಸಮನ್ವಯೀಕರಣವನ್ನು

ಕೆಳಗೆ ತಿಳಿಸಿರುವ ಕಾಲಮಿತಿಯೊಳಗೆ ನಿರ್ವಹಿಸುವಂತೆ ತಮ್ಮ ಅಧೀನದ ಎಲ್ಲಾ ನಿಯಂತ್ರಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲು ಸೂಚಿಸಲಾಗಿದೆ. ತಪ್ಪಿದಲ್ಲಿ ಡಿಡಿಓ ಗಳ ಮುಂದಿನ ವೇತನೇತರ ಬಿಲ್ಲುಗಳನ್ನು ತಡೆ ಹಿಡಿಯಲು ಖಜಾನಾಧಿಕಾರಿಗಳಿಗೆ ಸೂಚಿಸಲಾಗಿದೆ.

| SL No. | Activity | Officer responsible | Timeline |
|---|---|---|---|
| 1 | 62(B) Expenditure Statement generation and reconciliation | DDO | 10th of the following month |
| 2 | 62(C) Broad Sheet and 62(D) compilation sheet generation and reconciliation | CO | 15th of the following month |
| 3 | 62(E) reconciliation | CCO | 20th of the following month |


29/10/2021

(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
10. ಆರ್ಥಿಕ ಇಲಾಖೆಯ ಸರ್ಕಾರದ ವಿಶೇಷಾಧಿಕಾರಿಗಳು/ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.
11. ಹೆಚ್ಚುವರಿ ನಿರ್ದೇಶಕರು, 5 ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
12. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು.
13. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.

## ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಟವಾಡೆ ಅಧಿಕಾರಿಗಳು (DDO) ಗಳು ಮಾಹೆವಾರು ಭರಿಸುವ ವೆಚ್ಚಗಳ ವರದಿ 62 (ಬಿ) ಯನ್ನು ಪರಿಶೀಲಿಸಿ ಖಜಾನೆ-2 ರಲ್ಲಿ ಸಮ ಸಮನ್ವಯೀಕರಿಸುವ ಕುರಿತು




ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಗೆ ಒಳಪಡುವ ಎಲ್ಲಾ ಹಣ ಸೆಳೆಯುವ ಅಧಿಕಾರಿಗಳು ಡಿಡಿಓಗಳು ಲೆಕ್ಕಸಮನ್ವಯೀಕರಣಕ್ಕೆ ನಿಗಧಿಗೊಳಿಸಿರುವ ನಮೂನೆ-62(ಬಿ)ಯನ್ನು ಖಜಾನೆ-2 ಮೂಲಕ EXPENDITURE RECONCILIATION WORKLIST 62Bಯನ್ನು ನಿಯಮಾನುಸಾರ ಪರಿಶೀಲಿಸಿ ತಾಳೆ ಮಾಡಿ ಹೊಂದಾಣಿಕೆಯಾದ ನಂತರ APPROVE ಮಾಡಲು ಸೂಚಿಸಲಾಗಿದೆ.

**DDO LOGIN**

↓

**ACCOUNT COMPILATION & RECONCILIATION**

↓

**TRANSACTIONS**

↓

**EXPENDITURE RECONCILIATION**

↓

**EXPENDITURE RECONCILIATION WORKLIST 62B**

↓

**VERIFY AND APPROVE**